# ನವಿಲುಗನ್ನಡಿ

- ಸುಂದರ ಛಾಯಾಚಿತ್ರ(ಪ್ರಕಾಶ ಕಂದಕೂರ) ಇರುವ ಆಗಸ್ಟ್ 'ಮಯೂರ'ದ ಮುಖಪುಟ ಸೊಗಸಾಗಿತ್ತು. ಸಂಪಾದಕೀಯ 'ಹೊಸತಿನ ಹಂಬಲ'ಕ್ಕೆ ಸಂಚಿಕೆಯ ಓರಣ–ಹೂರಣಕ್ಕೆ ಪೂರಕ. 'ಪುಸ್ತಕ ಪರಾಗ' ಮತ್ತು 'ಚಿತ್ತ ಕೆತ್ತಿದ ಚಿತ್ರ' ಅಂಕಣಗಳು ಉತ್ತಮ ಆರಂಭ.

**ಬಿ.ಆರ್. ಅಣ್ಣಾಸಾಗರ, ಸೇಡಂ**

- ಚಿಣ್ಣರ ಗರಿ ಹಿಡಿದ ಸಂತಸದ ನಗು (ಮುಖಪುಟ), ಹೊಸ ಭಾವ–ಬಣ್ಣದ ನವನವೀನ ಒಲವಿನ ನರ್ತನ, ಪುಟ ತಿರುವಿದರೆ ಪ್ರತಿನೋಟಕ್ಕೂ ಹೊಸ ಹೂರಣ... ಅದೆಷ್ಟು ಅಂದ! ಹಾಸ್ಯ, ಲಾಸ್ಯ, ಕತೆ, ಕವಿತೆ, ವಿಚಾರ, ಚಿಂತನ–ಮಂಥನ ಪ್ರತಿ ಪುಟವೂ ಗರಿಗರಿಯಾಗಿವೆ!

**ನಗರ ಗುರುದೇವ್ ಭಂಡಾರ್ಕರ್, ಹೊಸನಗರ**

- 'ಮಯೂರ'ದ ಹೊಸತನ ಗಮನ ಸೆಳೆಯುತ್ತಿದೆ. ಜಬೀವುಲ್ಲಾ ಅವರ ರೇಖೆಗಳು ಇಷ್ಟವಾದವು. ವಿನ್ಯಾಸ ಮತ್ತಷ್ಟು ಖುಷಿ ಕೊಟ್ಟಿತು.

**ಮನೋಜ್ ಹಳೆಯಂಗಡಿ**

- 'ವಿಸ್ಮೃತಿ' (ಕೊಂಕಣಿ ಮೂಲ: ಜಯಂತಿ ನಾಯಕ್ ಕನ್ನಡಕ್ಕೆ: ಗೀತಾ ಶೆಣೈ) ಓದಿದಾಗ ನಿಜಕ್ಕೂ ಕಣ್ಣುಗಳು ತೇವಗೊಂಡವು. ಅತ್ಯುತ್ತಮ ಕತೆಗಳನ್ನು ಹೆಕ್ಕಿ ಕೊಡುತ್ತಿರುವ 'ಮಯೂರ'ಕ್ಕೆ ಅನಂತ ಧನ್ಯವಾದ.

**ಸಂಪಿಗೆ ವಾಸುದೇವ್, ಬೆಂಗಳೂರು**

- ನಟರಾಜ್ ಹುಳಿಯಾರ್ ಅವರ ಲೇಖನ 'ಮಾಂತ್ರಿಕ ಮಾರ್ಕ್ವೆಜ್‌ಗೆ ಮರೆವು ಬಂದಾಗ' ಉತ್ತಮ ಬರಹ. ವ್ಯಾಸನ ಕರ್ಣ, ಕಾಳಿದಾಸನ ದುಷ್ಯಂತನ ಮರೆವುಗಳನ್ನು ನೆನಪಿಸಿಕೊಂಡು ಆ ಸ್ಥಿತಿಯನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

**ವಿಜಯಕುಮಾರ ಎಚ್. ವಿಶ್ವಮಾನವ, ಕಲಬುರಗಿ**




- 'ಕಲ್ಪನೆ ಕಾವ್ಯ' ಅಂಕಣದಲ್ಲಿ ಪ್ರಕಟವಾದ ದೇವನೂರು ನಂದೀಶ ಅವರ ಕವಿತೆಯ ಶೀರ್ಷಿಕೆ 'ಯು ಆರ್ ಲುಕ್ಸ್ ಬ್ಯೂಟಿಫುಲ್' ಎಂಬುದು ತಪ್ಪು ಪ್ರಯೋಗ. ಅದು 'ಯು ಲುಕ್ ಬ್ಯೂಟಿಫುಲ್' ಎಂದಾಗಬೇಕಿತ್ತು.

**ಕೆ.ಆರ್. ಶ್ರೀನಿವಾಸಮೂರ್ತಿ, ಗಿಳಿಗಾರು**

- ಚಿದಾನಂದ ಸಾಲಿಯವರ ಲೇಖನ (ಚಿತ್ತ ಕೆತ್ತಿದ ಚಿತ್ರ) ಯು.ಆರ್. ಅನಂತಮೂರ್ತಿಯವರ ಕತೆ 'ಸೂರ್ಯನ ಕುದುರೆ'ಯಲ್ಲಿ ಬರುವ ಹಡೆವೆಂಕಟನನ್ನು ಹುಡುಕಿಕೊಂಡು ಹೋಗುವಂತೆ ಮಾಡಿತು.

**ಅನುಪಮಾ ಎಚ್.ಎಂ., ಧಾರವಾಡ**

- 'ಎಂಥ ಮಧುರ ದನಿ' (ಅರೆಬಿಕ್ ಮೂಲ: ಸಾಲ್ವಾ ಬಕ್ರ್ ಕನ್ನಡಕ್ಕೆ: ಕೇಶವ ಮಳಗಿ) ಕಣ್ಣು ತೆರೆಸುವ ಕತೆ. ಹೆಣ್ಣಿನ ಪ್ರತಿಭೆಗೆ ಅವಕಾಶವನ್ನೇ ಕೊಡದ ಕುಟುಂಬ ವ್ಯವಸ್ಥೆ, ಸಾಮಾಜಿಕ ಮನಃಸ್ಥಿತಿಯ ಮೇಲೆ ಕತೆ ಬೆಳಕು ಚೆಲ್ಲುತ್ತದೆ.

**ಕಾವ್ಯಾ ಹಿರೇಮಠ, ಬೆಂಗಳೂರು**

- ಕಲೀಮ್ ಉಲ್ಲಾ ಅವರ ಪ್ರಬಂಧ (ಪಾಟಿಸವಾಲಿನ ಜಯಕ್ಕ) ರೋಚಕವಾಗಿತ್ತು. ಸೂಕ್ಷ್ಮ ಸಂಗತಿಗಳನ್ನು ಲೇಖಕರು ಹಾಸ್ಯಮಯವಾಗಿ ಕಟ್ಟಿಕೊಟ್ಟಿದ್ದಾರೆ.

**ಮಹೇಶ್ ಎಸ್.ಎಚ್., ಉಜ್ಜಿನಿ**